# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಗ್ರಾಮ ವಿಕಾಸ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಯಲಬುರ್ಗ ವಿಧಾನಸಭಾ ಕ್ಷೇತ್ರದ ಮುಧೋಳ ಗ್ರಾಮದ ಅಭಿವೃದ್ಧಿಗಾಗಿ ರೂ. 179.85 ಲಕ್ಷಗಳಿಗೆ ತಯಾರಿಸಿರುವ ಅಂದಾಜು ಪತ್ರಿಕೆಗೆ ಆಡಳಿತಾತ್ಮಕ ಅನುಮೋದನೆ ನೀಡುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ:16:ಗ್ರಾವಿಯೋ:2015, ಬೆಂಗಳೂರು ದಿನಾಂಕ: 24.06.2015.
2. ಸರ್ಕಾರದ ಪತ್ರ ಸಂಖ್ಯೆ:ಗ್ರಾಅಪ:03:ಗ್ರಾವಿಯೋ:2016, ಬೆಂಗಳೂರು ದಿನಾಂಕ: 26.03.2016 ಮತ್ತು 29.03.2016.
3. ಮು.ಕಾ.ಅಧಿಕಾರಿಗಳು, ಜಿ.ಪಂ ಕೊಪ್ಪಳ ಇವರ ಪತ್ರ ಸಂಖ್ಯೆ:ಜಿಪಂಕೊ /ಅಭಿವೃದ್ಧಿ/ಗ್ರಾವಿಯೋ/2016-17, ದಿನಾಂಕ: 26.08.2016.
4. ವ್ಯವಸ್ಥಾಪಕನಿರ್ದೇಶಕರು, ಕೆ.ಆರ್.ಐ.ಡಿ.ಎಲ್ ಇವರ ಪತ್ರ ಸಂಖ್ಯೆ: ಕೆಆರ್ ಐಡಿಎಲ್/ಕಾಮಗಾರಿ/ಗ್ರಾ.ವಿ.ಯೋ/2017-18 , ದಿ: 25.04.2017

***

ಪ್ರಸ್ತಾವನೆ:

ಗ್ರಾಮ ವಿಕಾಸ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಯಲಬುರ್ಗ ವಿಧಾನಸಭಾ ಕ್ಷೇತ್ರದ ಮುಧೋಳ ಗ್ರಾಮವೊಂದನ್ನೇ ಅಭಿವೃದ್ಧಿಪಡಿಸಲು ಮೇಲೆ ಓದಲಾದ (1) ರ ಸರ್ಕಾರಿ ಆದೇಶ ಹೊರಡಿಸಲಾಗಿದ್ದು ಅದರಂತೆ ಓದಲಾದ ಉಲ್ಲೇಖ (2) ರಂತೆ ಯಲಬುರ್ಗ ವಿಧಾನಸಭಾ ಕ್ಷೇತ್ರದ ಮುಧೋಳ ಗ್ರಾಮದ ಅಭಿವೃದ್ಧಿಗಾಗಿ ರೂ. 3.75 ಕೋಟಿಗೆ ಸಿದ್ಧಪಡಿಸಿದ್ದ ಗ್ರಾಮಾಭಿವೃದ್ಧಿ ಯೋಜನೆಗೆ ಸರ್ಕಾರದ ಅನುಮೋದನೆಯನ್ನು ನೀಡಲಾಗಿತ್ತು.

ಮುಧೋಳ ಗ್ರಾಮದ ಅಭಿವೃದ್ಧಿಗಾಗಿ ರಸ್ತೆ ಕಾಮಗಾರಿಗಳನ್ನು ಕೈಗೊಳ್ಳಲು ರೂ. 179.85 ಲಕ್ಷಗಳ ಮಿತಿಯಲ್ಲಿ ಮತ್ತು ಇತರೆ ರಸ್ತೆ, ಸಿವಿಲ್ ಕಾಮಗಾರಿಗಳು ಮತ್ತು ಇತರೆ ಕಾರ್ಯಕ್ರಮಗಳನ್ನು ರೂ. 195.15 ಲಕ್ಷಗಳಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮೂಲಕ ಕೈಗೊಳ್ಳಲು ಓದಲಾದ ಉಲ್ಲೇಖ (3) ರಲ್ಲಿ ಮು.ಕಾ.ಅಧಿಕಾರಿಗಳು, ಜಿ.ಪಂ ಕೊಪ್ಪಳ ರವರು ಕೋರಿರುತ್ತಾರೆ.

ಓದಲಾದ ಉಲ್ಲೇಖ (4) ರಲ್ಲಿ ಕೊಪ್ಪಳ ಜಿಲ್ಲೆ, ಯಲಬುರ್ಗ ತಾಲ್ಲೂಕಿನ ಮುಧೋಳ ಗ್ರಾಮಕ್ಕೆ ಗ್ರಾಮ ವಿಕಾಸ ಯೋಜನೆಯಡಿ ಬಳ್ಳಾರಿ ವೃತ್ತದ ಎಸ್.ಆರ್. 2015 ರ ದರ ಪಟ್ಟಿ ಅಳವಡಿಸಿ ಕಾಮಗಾರಿಯ ಅಂದಾಜು ಪಟ್ಟಿ ರೂ. 179.85 ಲಕ್ಷಗಳ ಪ್ರಸ್ತಾವನೆಯನ್ನು ಸರ್ಕಾರವು ಪರಿಶೀಲಿಸಿದೆ ಮತ್ತು ಗ್ರಾಮ ವಿಕಾಸ ಯೋಜನೆಯಡಿ ಮುಧೋಳ ಗ್ರಾಮದ ವಾರ್ಡ್ ನಂ 1 ಮತ್ತು 5 ರಲ್ಲಿ ರಸ್ತೆ ಕಾಮಗಾರಿಗಳನ್ನು ರೂ. 179.85 ಲಕ್ಷಗಳ ಮಿತಿಯಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮೂಲಕ ಕೈಗೊಂಡು ಅನುಷ್ಠಾನಗೊಳಿಸಲು ತೀರ್ಮಾನಿಸಿದೆ.

ಪ್ರಯುಕ್ತ ಈ ಆದೇಶ.

## ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ : 13 : ಗ್ರಾವಿಯೋ : 2017, ಬೆಂಗಳೂರು, ದಿನಾಂಕ 26.04.2017

ಪ್ರಸ್ತಾವನೆಯಲ್ಲಿ ವಿವರಿಸಿದಂತೆ, ಗ್ರಾಮ ವಿಕಾಸ ಯೋಜನೆಯಡಿ ಕೊಪ್ಪಳ ಜಿಲ್ಲೆಯ ಯಲಬುರ್ಗ ವಿಧಾನಸಭಾ ಕ್ಷೇತ್ರದ ಮುಧೋಳ ಗ್ರಾಮದಲ್ಲಿ ವಾರ್ಡ್ ನಂ 1 ಮತ್ತು 5 ರಲ್ಲಿ ರಸ್ತೆ

ಕಾಮಗಾರಿಗಳನ್ನು ರೂ. 179.85 ಲಕ್ಷಗಳ (ರೂಪಾಯಿ ನೂರ ಎಪ್ಪತ್ತೊಂಬತ್ತು ಲಕ್ಷ ಮತ್ತು ಎಂಬತ್ತೈದು ಸಾವಿರಗಳು ಮಾತ್ರ) ಮಿತಿಯಲ್ಲಿ ಕೆ.ಆರ್.ಐ.ಡಿ.ಎಲ್ ಸಂಸ್ಥೆಯ ಮೂಲಕ ಕೈಗೊಂಡು ಅನುಷ್ಠಾನಗೊಳಿಸಲು ಆಡಳಿತಾತ್ಮಕ ಅನುಮೋದನೆ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಡಾ.ಬೂವನಹಳ್ಳಿನಾಗರಾಜ್)
ನಿರ್ದೇಶಕರು (ಸುಗ್ರಾಯೋ) ಹಾಗೂ
ಪದನಿಮಿತ್ತ ಸರ್ಕಾರದ ಉಪಕಾರ್ಯದರ್ಶಿ,
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

ಪ್ರತಿಯನ್ನು ಮಾಹಿತಿಗಾಗಿ:

1. ಮಹಾಲೇಖಪಾಲರು (ಲೆಕ್ಕಪತ್ರ), ಕರ್ನಾಟಕ, ಬೆಂಗಳೂರು.
2. ಮಹಾಲೇಖಪಾಲರು (ಆಡಿಟ್ – 1 & 2), ಕರ್ನಾಟಕ, ಬೆಂಗಳೂರು
3. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌದ, ಬೆಂಗಳೂರು.
4. ಮಾನ್ಯ ಉನ್ನತ ಶಿಕ್ಷಣ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
5. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು / ಕಾರ್ಯದರ್ಶಿಗಳು (ಪಂ.ರಾಜ್), ಗ್ರಾ ಮತ್ತು ಪಂ ರಾಜ್ ಇಲಾಖೆ, ಬೆಂಗಳೂರು.
6. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.
7. ಮುಖ್ಯ ಲೆಕ್ಕಾಧಿಕಾರಿಗಳು ಮತ್ತು ಮುಖ್ಯ ಯೋಜನಾಧಿಕಾರಿ, ಕೊಪ್ಪಳ.
8. ಮುಖ್ಯಸ್ಥರು ಗಣಕಕೋಶ, ಗ್ರಾ ಮತ್ತು ಪಂ.ರಾಜ್ ಇಲಾಖೆ (ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
9. ಸಂಪಾದಕರು, ಕರ್ನಾಟಕ ವಿಕಾಸ. ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು
10. ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.